ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

5

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE 13/4/21

## ಸೋಂಕಿಗೆ ಶರವೇಗ । ಸರ್ವಪಕ್ಷ ಸಭೆ ಬಳಿಕ ಸ್ಪಷ್ಟ ತೀರ್ಮಾನ


# ಲಾಕ್‌ಡೌನ್‌ನತ್ತ ರಾಜ್ಯ?

13-4-21

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯದಲ್ಲಿ ಕರೊನಾ ಮಹಾಮಾರಿಯನ್ನು ಕಟ್ಟಿಹಾಕುವ ಯತ್ನ ಮುಂದುವರಿದಿರುವಂತೆಯೇ, ಸೋಂಕು ಪ್ರಕರಣ ಹೆಚ್ಚಿರುವ ನಗರ ಪ್ರದೇಶಗಳಲ್ಲಿ ತಜ್ಞರ ಸಲಹೆಯಂತೆ ಮತ್ತೆ ಲಾಕ್‌ಡೌನ್ ಜಾರಿಗೊಳಿಸುವತ್ತ ಸರ್ಕಾರದ ಚಿತ್ತ ಹರಿದಂತಿದೆ. ಕರೊನಾ ನಿಯಂತ್ರಣ ಸಂಬಂಧ ಸರ್ವಪಕ್ಷ ಸಭೆ ಕರೆದು ಅಭಿಪ್ರಾಯ ಸಂಗ್ರಹಿಸಿ ಸ್ಪಷ್ಟ ತೀರ್ಮಾನ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ರಾಜ್ಯಗಳಿಗೆ ಸಲಹೆ ನೀಡಿದ್ದು, ಲಾಕ್‌ಡೌನ್‌ಗೆ ಸರ್ಕಾರ ದಿನಾಂಕ ನಿಗದಿ ಮಾಡುವುದಷ್ಟೇ ಬಾಕಿ ಎಂಬ ಮಾತುಗಳು ಕೇಳಿಬರಲಾರಂಭಿಸಿವೆ. ಏ.18 ಅಥವಾ 19ರಂದು ಸರ್ವಪಕ್ಷ ಸಭೆ ಕರೆಯಲು ಸರ್ಕಾರ ನಿರ್ಧರಿಸಿದೆ. ಆ ಸಭೆಯಲ್ಲಿ ಬರುವ ಅಭಿಪ್ರಾಯದ ಆಧಾರದ ಮೇಲೆ ತೀರ್ಮಾನಗಳು ಸ್ಪಷ್ಟ ರೂಪ ಪಡೆದುಕೊಳ್ಳುತ್ತವೆ. ಈ ನಡುವೆ ರಾಜ್ಯದಲ್ಲಿ ಲಾಕ್‌ಡೌನ್ ಮಾಡಿದರಷ್ಟೇ ಪರಿಸ್ಥಿತಿ ನಿಯಂತ್ರಿಸಬಹುದೆಂಬ ತಜ್ಞರ ಸಲಹೆಗೆ ಆರೋಗ್ಯ ಇಲಾಖೆ ಜೋತುಬಿದ್ದಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತ್ರ ಲಾಕ್‌ಡೌನ್ ಬಗ್ಗೆ ಒಲವು ತೋರಿಸಿಲ್ಲ. ಆದರೆ, ಸರ್ವಪಕ್ಷ ಸಭೆಯಲ್ಲಿ ಬರುವ ಅಭಿಪ್ರಾಯಗಳ ಮೇಲೆಯೇ ನಿರ್ಧಾರ ಅಂತಿಮವಾಗುವ ಸಾಧ್ಯತೆ ಹೆಚ್ಚಿದೆ. ● ಪುಟ 8

» **ಲಾಕ್ ಹೇರಲು ಸಿಎಂಗೆ ಒಲವಿಲ್ಲ**



### ಎಷ್ಟು ದಿನ?

14 ದಿನ ಲಾಕ್‌ಡೌನ್ ಒಳಿತೆಂದು ತಜ್ಞರ ಸಮಿತಿ ಹೇಳಿದೆ. ಇದು 21 ದಿನಕ್ಕಿಂತ ಹೆಚ್ಚು ವಿಸ್ತರಣೆ ಆಗಲೂ ಬಹುದೆನ್ನಲಾಗಿದೆ.

## ನಿಯಂತ್ರಣ ಸಿಗದಿದ್ದರಷ್ಟೇ ಕಠಿಣ ಕ್ರಮ



ಬೀದರ್: ಕರೊನಾ ನಿಯಂತ್ರಿಸುವುದಕ್ಕಾಗಿ ರಾಜ್ಯದಲ್ಲಿ ಸದ್ಯಕ್ಕೆ ಲಾಕ್‌ಡೌನ್ ಮಾಡಲು ಯೋಚಿಸಿಲ್ಲ. ಆದರೆ ಮುಂದಿನ ದಿನಗಳಲ್ಲಿ ಸೋಂಕು ನಿಯಂತ್ರಣಕ್ಕೆ ಬಾರದಿದ್ದರೆ ಕಠಿಣ ಕ್ರಮ ಅನಿವಾರ್ಯ ಎಂದು ಸಿಎಂ ಯಡಿಯೂರಪ್ಪ ಹೇಳಿದರು. ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ದಿನೇದಿನೆ ಕರೊನಾ ಹೆಚ್ಚಾಗುತ್ತಿದೆ. ಈಗಾಗಲೇ ಕೆಲ ಜಿಲ್ಲೆಗಳಲ್ಲಿ ನೈಟ್ ಕರ್ಫ್ಯೂ ಜಾರಿ ಮಾಡಲಾಗಿದೆ. ಅಗತ್ಯಬಿದ್ದಲ್ಲಿ ಬೇರೆ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತದೆ ಎಂದರು. ● ಪುಟ 8



ಯುಗಾದಿ ಹಬ್ಬದ ಸಂದರ್ಭದಲ್ಲಿ ಎಲ್ಲರೂ ಬೇವು, ಬೆಲ್ಲದಂತಿರುವ ಲಸಿಕೆ ಪಡೆದು ಸುರಕ್ಷಿತರಾಗಿರಬೇಕು. ನಿಯಮಗಳನ್ನು ಪಾಲಿಸಿ ಕರೊನಾ ನಿಯಂತ್ರಣಕ್ಕೆ ಸಹಕಾರ ನೀಡಬೇಕು.

। ಡಾ.ಕೆ.ಸುಧಾಕರ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ.

**ವಿಜಯವಾಣಿ ಕಳಕಳಿ**

- ಹಬ್ಬ ಆಚರಿಸುವ ಉತ್ಸಾಹ ನಿಮ್ಮ ಜೀವಕ್ಕೆ ಮುಳುವಾಗದಿರಲಿ
- ಕರೊನಾ ನಿಯಮ ಪಾಲನೆ ನಿಮ್ಮ ಜವಾಬ್ದಾರಿಯಾಗಿರಲಿ
- ಯುಗಾದಿ ಸಂಭ್ರಮ ಮನೆಗೆ ಸೀಮಿತವಾಗಿರಲಿ
- ಹಬ್ಬದೂಟ, ಉಡುಗೊರೆ ಕೊಡಲು ಹೊರಗೆ ಹೋಗದಿರಿ
- ನೆಂಟರಿಷ್ಟರಿಗೂ ಈ ಸಲ ಮನೆಗೆ ಬಾರದಂತೆ ಕಿವಿಮಾತು ಹೇಳಿ

### ಬ್ರೆಜಿಲನ್ನು ಹಿಂದಿಕ್ಕಿದ ಭಾರತ

ಸೋಮವಾರ 1.68 ಲಕ್ಷ ಕೇಸ್

...ಪುಟ-12...

ಕರ್ನಾಟಕದಲ್ಲಿ 9579 ಪ್ರಕರಣ

...ಪುಟ-11...

ನಗರ ಪ್ರದೇಶಕ್ಕೆ ಸೀಮಿತ ಸಾಧ್ಯತೆ  ಜಿಲ್ಲಾ ಕೇಂದ್ರಗಳಲ್ಲಿ ಎಚ್ಚರಿಕೆ

# ಕರೊನಾ ಮುನ್ನೆಚ್ಚರ ಲಾಕ್‌ಡೌನ್‌ನತ್ತ ರಾಜ್ಯ?

ವಿ.ವಾ. 15-4-21

ಮೊದಲನೇ ಪುಟದಿಂದ...

ಹಾಸನದಲ್ಲಿ ಏ.19ರಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ನಡೆಯಲಿದೆ. 18ರಂದು ಪಕ್ಷದ ಪ್ರಮುಖರ ಸಭೆ ನಡೆಯುವ ಸಾಧ್ಯತೆ ಇದೆ. ಈ ಸಭೆಗೆ 'ಅಡಚಣೆ'ಯಾಗದಂತೆ ಮಾ.20ರ ಬಳಿಕವಷ್ಟೇ ಲಾಕ್‌ಡೌನ್ ಬಗ್ಗೆ ಸರ್ಕಾರ ತೀರ್ಮಾನ ಹೊರಹಾಕಬಹುದೆಂಬ ಅಭಿಪ್ರಾಯ ಆರೋಗ್ಯ ಇಲಾಖೆಯಲ್ಲಿದೆ. ರಾಜ್ಯದ ನಿರ್ಣಯವನ್ನು ಕೇಂದ್ರ ಒಪ್ಪಿದರಷ್ಟೇ ಅರೆ ಲಾಕ್‌ಡೌನ್ ಜಾರಿಯಾಗಬಹುದು.

## ಪರಿಸ್ಥಿತಿ ಹೇಗಿದೆ?

ಅಪಾಯದ ಮಟ್ಟ: ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬೀದರ್, ಹಾಸನ, ಕಲಬುರಗಿ, ಮೈಸೂರು, ತುಮಕೂರು, ದಕ್ಷಿಣ ಕನ್ನಡ, ಧಾರವಾಡ, ವಿಜಯಪುರ

ಅಪಾಯದೆಡೆಗೆ: ಬೆಳಗಾವಿ, ಕೋಲಾರ, ಮಂಡ್ಯ, ಉಡುಪಿ

## ಕಾರಣಗಳೇನು?

1 ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲು ಹಾಸಿಗೆ ಕೊರತೆಯಾಗಬಹುದು

2 ಆಂಬುಲೆನ್ಸ್, ವೆಂಟಿಲೇಟರ್, ಆಕ್ಸಿಜನ್ ಯೂನಿಟ್ ಸಾಕಾಗದೇ ಹೋಗಬಹುದು

3 ಹಿರಿಯರಿಗೆ ಹೆಚ್ಚು ಆರೋಗ್ಯ ಸಮಸ್ಯೆಯಾಗಬಹುದು

4 ಇತ್ತೀಚೆಗೆ ಯುವಕರಲ್ಲಿ ಸೋಂಕು ಹೆಚ್ಚಿದೆ, ಅಪಾಯ ಗಂಭೀರ

5 ಸೋಂಕು ಲಕ್ಷಣರಹಿತರ ಸಂಖ್ಯೆಯೇ ಹೆಚ್ಚಿರುವುದರಿಂದ ಹರಡುವಿಕೆ ವ್ಯಾಪಕ

6 ಸಭೆ, ಸಮಾರಂಭ, ಮಾರುಕಟ್ಟೆಗಳಲ್ಲಿ ಜನತೆ ಎಚ್ಚರಿಕೆ ವಹಿಸುತ್ತಿಲ್ಲ

7 ಲಸಿಕೆ ವಿತರಣೆ ಇನ್ನೂ ಟೇಕಾಫ್ ಹಂತದಲ್ಲಿದೆ.

## ಬದಲಾಗುವುದೇ ಸ್ವರೂಪ?

- ಲಾಕ್‌ಡೌನ್ ಬಗ್ಗೆ ವಿರೋಧ ಸಾಕಷ್ಟಿದೆ. ಈ ಕಾರಣಕ್ಕೆ ಸೋಂಕು ಹೆಚ್ಚಿರುವ ನಗರ ಪ್ರದೇಶಕ್ಕೆ ಸೀಮಿತವಾದಂತೆ ಲಾಕ್‌ಡೌನ್ ಘೋಷಿಸುವ ಸಾಧ್ಯತೆ ಹೆಚ್ಚಿದೆ.
- ಗ್ರಾಮೀಣ ಭಾಗದಲ್ಲಿ, ತಾಲೂಕು ಕೇಂದ್ರಗಳಲ್ಲಿ, ಸೋಂಕು ಹೆಚ್ಚಿರದ ಜಿಲ್ಲಾ ಕೇಂದ್ರಗಳಲ್ಲಿ ಎಚ್ಚರಿಕೆ ಕ್ರಮವಹಿಸುವುದು
- ಸಭೆ, ಸಮಾರಂಭದಲ್ಲಿ ಪಾಲ್ಗೊಳ್ಳುವವರ ಸಂಖ್ಯೆಗೆ ಇನ್ನಷ್ಟು ಮಿತಿ ಹಾಕಲಾಗುತ್ತದೆ
- ಕಳೆದ ಬಾರಿ ಆದ ಸಮಸ್ಯೆ ಗುರುತಿಸಿ ಅವುಗಳಿಗೆ ಪರಿಹಾರ ದಾರಿ ರೂಪಿಸಿಕೊಳ್ಳುವುದು
- ವಸತಿ ಸಹಿತ ಕೈಗಾರಿಕೆಗಳ ಕಾರ್ಯನಿರ್ವಹಣೆಗೆ ಅವಕಾಶಕ್ಕೆ ಒಲವು
- ರಾಜ್ಯಾದ್ಯಂತ ಬೂತ್ ಮಟ್ಟದ ತಂಡ ಸಕ್ರಿಯಗೊಳಿಸಿ, ಪ್ರತಿಯೊಬ್ಬರ ಆರೋಗ್ಯದ ಮೇಲೆ ನಿಗಾ

## ಲಾಕ್‌ಗೆ ವಿರೋಧವೇಕೆ?

ಆರ್ಥಿಕ ಚಟುವಟಿಕೆ ಚೇತರಿಕೆ ಹಾದಿಯಲ್ಲಿದೆ. ಒಂದು ವೇಳೆ ಮತ್ತೆ ಲಾಕ್‌ಡೌನ್ ಮಾಡಿದರೆ ಜನ ಸಾಮಾನ್ಯರು ಹೆಚ್ಚಿನ ಸಮಸ್ಯೆಗೆ ಸಿಲುಕಿಕೊಳ್ಳುತ್ತಾರೆ. ಸರ್ಕಾರಕ್ಕೆ ಆಗತ್ಯವಾದ ಆದಾಯ ಬಾರದೆ ವೆಚ್ಚ ನಿಭಾಯಿಸುವುದು ಕಷ್ಟವಾಗಬಹುದು. ಅಷ್ಟೇ ಅಲ್ಲದೇ, ಕನಿಷ್ಠ ವೇತನ, ಕೂಲಿ ಪಡೆಯುವವರಿಗೆ ಆರ್ಥಿಕ ನೆರವು ಕೊಡಬೇಕಾಗಬಹುದು. ಉಚಿತ ಪಡಿತರ ವಿತರಿಸಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಹೊರೆ ಹೆಚ್ಚಾಗುವುದರಿಂದ ಅಧಿಕಾರಿಗಳು ಮತ್ತು ಸಿಎಂ ಲಾಕ್‌ಡೌನ್ ಬಗ್ಗೆ ಒಲವು ಹೊಂದಿಲ್ಲ.

# ಸೋಂಕು ನಿಯಂತ್ರಣ ಸಿಗದಿದ್ದರಷ್ಟೇ ಕಠಿಣ ಕ್ರಮ

ಮೊದಲನೇ ಪುಟದಿಂದ...

ಒಂದು ವಾರದಲ್ಲಿ ಸೋಂಕು ನಿಯಂತ್ರಣಕ್ಕೆ ಬರಬಹುದೆಂಬ ವಿಶ್ವಾಸವಿದೆ. ಒಂದೊಮ್ಮೆ ನಿಯಂತ್ರಣ ತಪ್ಪಿದರೆ ಜನಾರೋಗ್ಯ, ಜೀವದ ಹಿತದಿಂದ ಕಠಿಣ ಕ್ರಮ ಕೈಗೊಳ್ಳಲೇಬೇಕಾಗುತ್ತದೆ ಎಂದರು.

ರಾಜ್ಯದಲ್ಲಿ ನಿತ್ಯ ಲಕ್ಷಾಂತರ ಜನರ ಕೋವಿಡ್ ಟೆಸ್ಟ್ ಮಾಡಲಾಗುತ್ತಿದೆ. ನಾವೆಷ್ಟೇ ಕೆಲಸ ಮಾಡಿದರೂ ಪ್ರತಿಪಕ್ಷಗಳಿಂದ ಟೀಕೆ, ಟಿಪ್ಪಣಿ ಬರುವುದು ಸಹಜ. ಆದರೆ ಇಂತಹ ಮಹಾಮಾರಿ ಸಮಸ್ಯೆ ಎದುರಾದಾಗ ಎಲ್ಲರೂ ಪಕ್ಷಭೇದ ಮರೆತು ಸಹಕರಿಸಬೇಕು. ಸೋಂಕು ನಿಯಂತ್ರಣವಾಗದಿದ್ದರೆ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಜ್ಞರ ಅಭಿಪ್ರಾಯ ಕೇಳಿ ಮುಂದೇನು ಮಾಡಬೇಕೆಂಬ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಮತ್ತೊಂದೆಡೆ ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಮಾತನಾಡಿದ ಸಿಎಂ ಬೆಂಗಳೂರಿನಲ್ಲಿ ನಡೆಯಲಿರುವ ಸರ್ವಪಕ್ಷ ಸಭೆಗೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಸೇರಿ ವಿವಿಧ ಪಕ್ಷಗಳ ಪ್ರಮುಖರನ್ನು ಸಭೆಗೆ ಆಹ್ವಾನಿಸಲಾಗುವುದು. ಎಲ್ಲರ ಅಭಿಪ್ರಾಯ ಪಡೆದು ಕರೊನಾ ತಡೆಗಟ್ಟುವ ನಿಟ್ಟಿನಲ್ಲಿ ಮುಂದೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ತೀರ್ಮಾನಿಸುವುದಾಗಿ ಹೇಳಿದರು.